ಪಿರಿಯಾಪಟ್ಟಣದ ಸೀಗಡಿಕಟ್ಟೆ ಗ್ರಾಮದಲ್ಲಿ ಬೆಳ್ಳಬೆಳಕು ಯೋಜನೆ ಜಾರಿಯಾಗದಿರುವುದು

4151 (4610) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಮಾಕೋಡು ಗ್ರಾಮ ಪಂಚಾಯಿತಿಗೆ ಸೇರಿದ ಸೀಗಡಿಕಟ್ಟೆ ಗ್ರಾಮದಲ್ಲಿ ಬೆಳ್ಳಬೆಳಕು ಯೋಜನೆ ಜಾರಿಗೊಳಿಸಲು ಪ್ರಸ್ತಾವನೆ ಬಂದಿದೆಯೆ;

ಆ) ಬಂದಿದ್ದಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆಯೆ;

ಇ) ಅನುಮೋದನೆ ನೀಡಿದ್ದಲ್ಲಿ ಎಷ್ಟು? ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ;

ಈ) ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಲಾಗುವುದು;

ಉ) ಯೋಜನೆ ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ ಎಷ್ಟು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳ ಕಛೇರಿಯಲ್ಲಿ ಪ್ರಸ್ತಾವನೆ ಇರುತ್ತದೆ.

ಆ) ಪ್ರಸ್ತಾವನೆಗೆ ಅಗತ್ಯವಾದ ಫಲಾನುಭವಿಗಳ ಪಟ್ಟಿ, ನಕ್ಷೆ ಹಾಗೂ ಅಂದಾಜು ಪಟ್ಟಿ ಇತ್ಯಾದಿಗಳನ್ನು ಪಡೆದು, ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಪ್ರಸ್ತಾವನೆಯು ಅಗತ್ಯ ಅಂದಾಜುಪಟ್ಟಿ, ನಕ್ಷೆ ಹಾಗೂ ಇನ್ನಿತರ ದಾಖಲಾತಿಗಳೊಂದಿಗೆ ನಿರ್ದೇಶನಾಲಯಕ್ಕೆ ಪಡೆದು ಪರಿಶೀಲಿಸಿ, ಅನುದಾನದ ಲಭ್ಯತೆಗೆ ಒಳಪಟ್ಟು ಪರಿಗಣಿಸಲಾಗುವುದು.

ಉ) ಅನುಮೋದನೆ ನೀಡುವಾಗ ಅವಧಿ ನಿರ್ಧರಿಸಲಾಗುವುದು.

ರಾಜ್ಯದಲ್ಲಿ ಅಂತರ್ಜಲ ನೀರಿನ ಕುಸಿತ

4154 (4772) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ತಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ತಾಲ್ಲೂಕುಗಳಲ್ಲಿಯ ಭೂಮಿಯಲ್ಲಿ ಅಂತರ್ಜಲದ ಆಳ ಎಷ್ಟು; ನೀರು ದೊರಕಲು ಎಷ್ಟು ಆಳ ತೆಗೆದು ಸರಾಸರಿ ಬೋರ್ ಅಳವಡಿಸಬೇಕಾಗಿದೆ. ವಿವರ ನೀಡುವುದು?

ಆ) ಪ್ರತಿ ತಾಲ್ಲೂಕುಗಳಲ್ಲಿ ಇಪ್ಪತ್ತು ವರ್ಷಗಳಲ್ಲಿಯ ಪ್ರತಿ ಐದು ವರ್ಷಗಳಂತೆ ಅಂತರ್ಜಲ ಎಷ್ಟು ಆಳ ಕೆಳಗೆ ಹೋಗಿರುವುದು ವಿವರ ನೀಡುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ರಾಜ್ಯದಲ್ಲಿನ ತಾಲ್ಲೂಕುವಾರು ಕನಿಷ್ಠ ಮತ್ತು ಗರಿಷ್ಠ ಅಂತರ್ಜಲ ಮಟ್ಟದ ವಿವರಗಳನ್ನು ಅನುಬಂಧ-Iರಲ್ಲಿ ನೀಡಲಾಗಿದೆ. ಪ್ರತಿ ತಾಲ್ಲೂಕಿನಲ್ಲಿ ವಿವಿಧ ಶಿಲಾ ರಚನೆಗಳನ್ನು ಮತ್ತು ಅದರ ಜಲಭರಗಳಲ್ಲಿ ವ್ಯತ್ಯಾಸ ಇರುವುದರಿಂದ ಅಂತರ್ಜಲವು ದೊರಕುವ ಆಳದಲ್ಲೂ ವ್ಯತ್ಯಾಸವಿದ್ದು, ಅಂತರ್ಜಲ ವಿವಿಧ ಆಳದಲ್ಲಿ ದೊರಕುವುದು. ವಿವಿಧ ಶಿಲಾ ರಚನೆಗಳಲ್ಲಿ ದೊರೆಯುವ ಅಂತರ್ಜಲದ ಕನಿಷ್ಠ ಮತ್ತು ಗರಿಷ್ಠ ಆಳವನ್ನು ಈ ಕೆಳಗೆ ನೀಡಲಾಗಿದೆ.